**ದಿನಾಂಕ 02.12.2023 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ– ಎದುರುದಾರರ ಪರ ಡಿ ಜಿ ಪಿ ಯವರಿಂದಃ –**

ನಮ್ಮ ತಂದೆ ಕೆಳನ್ಯಾಯಾಲಯದಲ್ಲಿ ಪರಿಹಾರದ ಹಣ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಂದೆ 10 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಮ್ಮ ತಂದೆಗೆ 5 ಜನ ಮಕ್ಕಳು, ಅವರೆಂದರೆ, ಕನ್ನಿಕಾ, ನಾನು ನಂಜುಂಡಸ್ವಾಮಿ, ಸಾವಿತ್ರಿ, ಕಾಂತಾಮಣಿ ಹಾಗೂ ಬಸವರಾಜು. ಇವರೆಲ್ಲರೂ ಜೀವಂತವಾಗಿರುತ್ತಾರೆ. ನಮ್ಮ ತಾಯಿ ಸಹ ಜೀವಂತವಾಗಿರುತ್ತಾರೆ. ನಮ್ಮ ತಂದೆಯ ಜೀವಂತ ಸದಸ್ಯರ ಮೂಲ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ನೀಡಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ನಮಗೆ ಸೇರಿದ ಹರದೂರು ಗ್ರಾಮದ ಜಮೀನು ಸರ್ವೆ ನಂ. 114/1, ಭೂಸ್ವಾಧೀನವಾಗಿರುತ್ತದೆ. ಸದರಿ ಜಮೀನು ಯಾವಾಗ ಭೂ ಸ್ವಾಧೀನವಾಗಿದೆ ಎಂಬುದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ನಮ್ಮ ಗ್ರಾಮದ ಸ್ವಾಮಿ ರವರ ಜಮೀನಿಗೆ ಹೆಚ್ಚಿನ ಪರಿಹಾರ ಬಂದ ಕಾರಣ ಈ ಮೇಲ್ಮನವಿ ಸಲ್ಲಿಸಿದ್ದೇವೆ. ಅದೊಂದು ಕಾರಣ ಬಿಟ್ಟರೇ ಈ ಮೇಲ್ಮನವಿ ಸಲ್ಲಿಸಲು ಬೇರೆ ಯಾವುದೇ ಕಾರಣ ಇರುವುದಿಲ್ಲ. ಈ ಮೇಲ್ಮನವಿಯನ್ನು 2,470 ದಿನಗಳ ವಿಳಂಬದಿಂದ ದಾಖಲಿಸಿದ್ದಕ್ಕೆ ಈ ಅರ್ಜಿಯಲ್ಲಿ ಯಾವುದೇ ಕಾರಣ ಬರೆಸಿರುವುದಿಲ್ಲ. ಸದರಿ ಕಾರಣಗಳನ್ನು ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಮ್ಮ ತಂದೆ ಈಗಾಗಲೇ ಅಂತಿಮ ಪರಿಹಾರ

ಪಡೆದ ಕಾರಣ ನಮಗೆ  ಹೆಚ್ಚಿನ ಪರಿಹಾರ ಕೇಳಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಹೆಚ್ಚಿಗೆ ಬೆಲೆ ಬಾಳುತ್ತದೆ ಎನ್ನುವುದಕ್ಕೆ ಯಾವುದೇ ದಾಖಲಾತಿಯನ್ನು ನೀಡಿಲ್ಲ ಎನ್ನುವುದು ನಿಜ. ನಾವು ಪೂರಕವಾದ ನ್ಯಾಯಾಲಯದ ಶುಲ್ಕ ಕಟ್ಟಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಬಂದು ಯಾವುದೇ ವಿಚಾರ ತಿಳಿಯದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.